**ಓ.ಎಸ್. ನಂ. 83/2022** **ಡಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 20.2.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ದಿನಾಂಕ 6.12.2010ರ ಕ್ರಯಪತ್ರವನ್ನು ನಿಡಿ1 ಎಂದು, ದಿನಾಂಕ 29.12.2000ರ ದಾನಪತ್ರವನ್ನು ಹಾಜರುಪಡಿಸಿದ್ದು ಅದನ್ನು ರುಜುವಾತುಪಡಿಸುವ ಷರತ್ತಿನೊಂದಿಗೆ ನಿಡಿ2 ಎಂದು, ದಿನಾಂಕ 10.3.1992ರ ಕ್ರಯಪತ್ರವನ್ನು ನಿಡಿ3 ಎಂದು ಗುರುತಿಸಲಾಯಿತು. ದಿನಾಂಕ 19.3.2004ರ ಹಕ್ಕು ನಿವೃತ್ತಿ ಪತ್ರ ಹಾಗೂ ದಿನಾಂಕ 15.3.1982ರ ಪಂಚಾಯಿತಿ ಕ್ರಯಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳು ನೋಂದಣಿಯಾಗದಿರುವುದರಿಂದ ಮತ್ತು ನಿಗದಿತ ಸ್ಟಾಂಪ್ ಶುಲ್ಕ ಪಾವತಿಸದಿರುವುದರಿಂದ ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ವಶಕ್ಕೆ ಪಡೆದುಕೊಂಡಿದ್ದು ಅವುಗಳನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ. ಗಣಕೀಕೃತ ಪಹಣಿಯನ್ನು ನಿಡಿ4 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.